MYSORE LEGISLATIVE ASSEMBLY.

THIRTY-SEVENTH DAY.

Friday, 2nd April 1954.

The House met in the Assembly Hall, Old Public Offices, Bangalore, at 12 NOON.

MR. SPEAKER (SRI H. SIDDAIYA, B.A., LL.B.) in the Chair.

QUESTIONS AND ANSWERS

Repair of Tanks.

Q.—738. **Sri T. NAGAPPA** (Tarikere).—

Will the Government be pleased to state :—

(*a*) the number of minor and major tanks repaired during the year 1953-54 in Tarikere taluk ;

(*b*) the amount of the estimate ;

(*c*) the tanks that are remaining incomplete ;

(*d*) the reason for delay till now ;

(*e*) whether action has been taken to complete them ?

A.—**Sri Kadidal MANJAPPA** (Minister for Revenue and Public Works).—

(*a*) Minor 31
Major 2

(*b*) Rs. 1,12,230.

(*c*) Six works are in progress and twenty are nearing completion.

(*d*) Labour difficulties, heavy rains and the prevalence of epidemic.

(*e*) Yes.

ಶ್ರೀ ಟಿ. ನಾಗಪ್ಪ.—6 ಕೆರೆಗಳ ಕಾಂಗಾರಿಗಳು ಮುಂದುವರಿಯುತ್ತಿವೆ ಎಂದು ಹೇಳಿದ್ದೀರಿ. ಅವು ಯಾವುವು ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಒಟ್ಟು ಕೆರೆಗಳ ಲಿಸ್ಟು ಕೊಡಬಲ್ಲೆ. ಅದರಲ್ಲಿ ಯಾವ ಕೆರೆಗಳ ಕೆಲಸ ಮುಂದುವರಿಯುತ್ತಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ನಾಗಪ್ಪ.—ಎರಡು ಮೇಜರ್ ಕೆರೆಗಳ ಕಾಂಗಾರಿ ನಡೆದಿದೆ ಎಂದು ಹೇಳಿದ್ದೀರಿ. ಅವು ಯಾವುವು ಎಂಬುದನ್ನು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಲಂಗದ ಹಳ್ಳಿ ಊರ ಮುಂದಿನ ಕೆರೆ ಮತ್ತು ಹುಣಸಗಟ್ಟೆ ಹುಚ್ಚ ತಿಮ್ಮನ ಕೆರೆ.

ಶ್ರೀ ಟಿ. ನಾಗಪ್ಪ.—ಮೈನರ್ ಕೆರೆಗಳು ರಿಪೇರಿ ಆಗಿರುವುದು 31 ಎಂದು ಇದೆ. ಕೆರೆ ರಿಪೇರಿ ಅಂದರೆ ಹೂಳು ತೆಗೆಯುವುದು, ಆಳ ಪಡಿಸುವುದು ಎಂದು ಅರ್ಥವೇ ?

ಶ್ರೀ ಕಡಿದಾಳ್ ಮಂಜಪ್ಪ.—ರಿಪೇರಿ ಅಂದರೆ ಹೂಳು ತೆಗೆಯುವುದು ಅಲ್ಲ. ಕೆರೆ ಉಡಾವಣೆ ಮಾಡುವುದು, breach filling—ಇಂಥವಕ್ಕೆ repairs ಎಂದು ಹೇಳುತ್ತಾರೆ.

ಶ್ರೀ ಟಿ. ನಾಗಪ್ಪ.—6 ಕೆರೆಗಳ ಕೆಲಸ ಮುಂದುವರಿಯುತ್ತಾ ಇರುವುದು ಈ ವರ್ಷ ಆಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆಗುತ್ತದೆ

Malnad Improvement.

Q.—837. **Sri G. PUTTASWAMY** (Chikmagalur–Mudigere—Scheduled Castes).—

Will the Government be pleased to state :—

(*a*) what is the amount of Malnad Improvement Grant sanctioned to each of the Malnad Districts during the year 1953-54 ;

(*b*) what is the outlay incurred ;

(*c*) what is the progress achieved so far under the above head ;

(*d*) whether the work has been stopped for want of funds ;

(*e*) whether the P.W.D. authorities have requested for additional grants ?

A.—**Sri Kadidal MANJAPPA** (Minister for Revenue and Public Works).—

(*a*) A sum of Rs. 5 lakhs is provided in the Budget for Malnad Communication in the Districts of Shimoga, Chikmagalur and Hassan.

(*b*) and (*c*) About Rs. 2 lakhs up to 31st January 1954.

(*d*) No.

(*e*) No.

ಶ್ರೀ ಜಿ. ಪುಟ್ಟಸ್ವಾಮಿ.—(*a*) ಪ್ರಶ್ನೆಗೆ ಉತ್ತರವಾಗಿ 5 ಲಕ್ಷ ರೂಪಾಯಿ ಗ್ರಾಂಟ್ ಒದಗಿಸಿದ್ದೀವೆ ಎಂದು ಹೇಳಿದ್ದೀರಿ ಮತ್ತು (*b*) ಗೆ ಉತ್ತರವಾಗಿ 31-1-54ನೇ ತಾರೀಖಿನವರೆಗೆ 2 ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದೀರಿ. ಈ ಹೈಕೆ ಚಿಕ್ಕ ಮಗಳೂರು ಡಿಸ್ಟ್ರಿಕ್ಟಿಗೆ ಎಷ್ಟು ಖರ್ಚುಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಇದುವರೆಗೂ ನುಮಾರು ಒಂದು ಲಕ್ಷ ರೂಪಾಯಿ ಖರ್ಚಾಗಿರಬಹುದು ಎಂದು ಕಾಣುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಯಾವ ಯಾವ ವರ್ಕ್ಸ್ ತೆಗೆದುಕೊಂಡಿದ್ದೀರಿ ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕೆಲಸಗಳು ಪ್ರಾರಂಭವಾದ ಮೇಲೆ ಆ ಕಂಟ್ರಾಕ್ಟರುಗಳಿಗೆ ಹಣ ಪಾವತಿ